ದೇಶಗಳನ್ನು ಮೀರಿ ನಿಂತ ವ್ಯಕ್ತಿತ್ವ ಶ್ರೀಕೃಷ್ಣನದು. ಸುಮಾರು ಐದು ಸಾವಿರ ವರ್ಷಗಳ ನಂತರವೂ ಶ್ರೀಕೃಷ್ಣನ ವಾಣಿ ಭಕ್ತರ ಹೃದಯದಲ್ಲಿ ಗೀತೆಯ ರೂಪದಲ್ಲಿ ಅನುರಣಿಸುತ್ತಿರುವುದರ ಹಿನ್ನೆಲೆ ಇದೇ ಆಗಿದೆ.

## ಗೀತೆಯ ಸ್ತ್ರೋತ

ಅರ್ಜುನನಿಗೆ ಶ್ರೀಕೃಷ್ಣ ರಣರಂಗದಲ್ಲಿ ಧೈರ್ಯದ, ಸತ್ಯದ, ತತ್ತ್ವದ ಹಾಗೂ ಆದರ್ಶದ ಉಪದೇಶ ಮಾಡಿದುದು ಒಂದು ಪ್ರಾಸಂಗಿಕ ಘಟನೆಯಾಗಿರಬಹುದು. ಆದರೆ ಅದು ಅಷ್ಟೇ ಅಲ್ಲ; ಮಾನವನಿಗೆ ಎಲ್ಲ ಕಾಲಕ್ಕೆ, ಎಲ್ಲ ಸನ್ನಿವೇಶಕ್ಕೆ ಉತ್ತರ ನೀಡಬಲ್ಲ, ದಾರಿ ತೋರಿಸಬಲ್ಲ ದಿವ್ಯ ಸ್ತೋತ್ರವದು. ಬೃಹತ್ತಾದ ಮಹಾ



ಭಾರತದ ಬಗ್ಗೆ ಹೇಳುತ್ತ 'ಜಗತ್ತಿನಲ್ಲಿ ಇರುವುದೆಲ್ಲ ಇಲ್ಲಿದೆ; ಇಲ್ಲಿಲ್ಲದ್ದೇನೂ ಜಗತ್ತನಲ್ಲಿಲ್ಲ' ಎನ್ನುತ್ತಾರೆ. ಆದರೆ ನಿಜವಾದ ಅರ್ಥದಲ್ಲಿ, ಗೀತೆಯನ್ನು ಕುರಿತೇ ಈ ಮಾತನ್ನು ಹೇಳಬೇಕು. ಮಹಾಭಾರತದ ತಿರುಳೇ ಗೀತೆ; ಆದ್ದರಿಂದ ಇಲ್ಲಿರುವುದೆಲ್ಲವೂ ತತ್ತ್ವರೂಪದಲ್ಲಿ. ಜಗತ್ತಿನಲ್ಲಿರುವ ಎಲ್ಲವೂ ತತ್ತ್ವರೂಪದಲ್ಲಿ ಇಲ್ಲಿದೆ, ಇಲ್ಲಿಲ್ಲದ ತತ್ತ್ವವನ್ನು ಇನ್ನೆಲ್ಲಿ ಕಾಣಬಹುದು? – ಗೀತೆಯ ಮಹತ್ವವನ್ನು ನಿಜವಾಗಿ ಅರಿತುಕೊಂಡ ಮಹಾನುಭಾವನ ಮಾತದು. ಮಾನವನ ಎಲ್ಲ ನೆಲೆಗಳಿಂದ, ಎಲ್ಲ ಹಂತಗಳಿಂದ ಆರಂಭಿಸಿ, ಅವನ ಅತ್ಯುನ್ನತ ಹಂತವಾದ ಸಾಕ್ಷಾತ್ಕಾರದವರೆಗೆ ಹೆಜ್ಜೆಹೆಜ್ಜೆಗೂ ಕೈಹಿಡಿದು ದಾರಿ ತೋರಿಸುವ ಸಾಧನೆಯ ಕೈದೀವಿಗೆ ಗೀತೆ. ಹಲವು ಬಗೆಯ ವ್ಯಕ್ತಿತ್ವಗಳಿಗೆ, ವಿಭಿನ್ನ ಮಾನಸಿಕ ರಚನೆಗಳಿಗೆ ಒಗ್ಗುವ ಸಾಧನೆಯ ಮಾರ್ಗಗಳು ಇಲ್ಲಿವೆ. ಮಾನಸಿಕ, ಬೌದ್ಧಿಕ, ಮನೋವೈಜ್ಞಾನಿಕ, ತಾತ್ತ್ವಿಕ, ಆಧ್ಯಾತ್ಮಿಕ – ಈ ಎಲ್ಲ ಹಂತಗಳಲ್ಲಿ ಶ್ರೀಕೃಷ್ಣನು ನೀಡುವ ಉಪದೇಶಗಳು ಸಾಧಕನಿಗೆ ಸಹಾಯ ಮಾಡುತ್ತವೆ. ಇದಕ್ಕನುಗುಣವಾಗಿ ಭಕ್ತಿಯೋಗ, ಕರ್ಮಯೋಗ, ಜ್ಞಾನಯೋಗವೇ ಮೊದಲಾದ 'ಯೋಗ'ಗಳನ್ನು ಜಗತ್ತಿಗೆ ಗೀತೆಯ ಮೂಲಕ ನೀಡಿದ್ದಾನೆ, 'ಯೋಗೇಶ್ವರ'ನಾದ ಕೃಷ್ಣ. ಇಲ್ಲಿ ಅತ್ಯಂತ ಅಚ್ಚರಿಯನ್ನು ಮೂಡಿಸುವ ಅಂಶವೆಂದರೆ, ಗೀತೆಯ ತತ್ತ್ವಗಳೆಲ್ಲವೂ ಶ್ರೀಕೃಷ್ಣನ ಜೀವನದಲ್ಲಿ ಗುಪ್ತಗಾಮಿನಿಯಂತೆ ಪ್ರವಹಿಸುತ್ತದೆ ಎಂಬುದು. ಆರನೇ ಅಧ್ಯಾಯದ ಸಮದರ್ಶಿತ್ವ, ಹನ್ನೆರಡನೇ ಅಧ್ಯಯದ ಭಕ್ತಿ–ಮಹಿಮೆ, ಹತ್ತನೇ ಅಧ್ಯಾಯದ ಅಸಾಮಾನ್ಯಗುಣದರ್ಶನ, ಹದಿನೆಂಟನೇ ಅಧ್ಯಾಯದಲ್ಲಿ ಮತ್ತು ಒಂಬತ್ತನೇ ಅಧ್ಯಾಯದಲ್ಲಿ ಕಂಡುಬರುವ ಶರಣಾಗತಿ ಮತ್ತು ವಿಶ್ವವಿಶಾಲ ಭಾವನೆ – ಇವು ಶ್ರೀಕೃಷ್ಣನ ವ್ಯಕ್ತಿತ್ವದ ಸಾರಭೂತ ಅಂಶಗಳೇ ಆಗಿವೆ. ಗೀತೆಯನ್ನು ಮಹಾಭಾರತದಲ್ಲಿ ಅನಂತರ ಸೇರಿಸಲಾಯಿತು ಎಂಬ ವಾದ ಇಲ್ಲಿ ನಿರರ್ಥಕವೆನಿಸುತ್ತದೆ.

## ಪೂರ್ಣ ಮಾನವ – ಪೂರ್ಣಾವತಾರ

ಶ್ರೀಕೃಷ್ಣನಿಗೆ ಎರಡು ಬಿರುದುಗಳಿವೆ. ಅವನನ್ನು 'ಪುರುಷೋತ್ತಮ'ನೆನ್ನುತ್ತಾರೆ. ಪುರುಷನೆಂದರೆ ಮಾನವ ಎಂದುಕೊಂಡಾಗ, ಶ್ರೀಕೃಷ್ಣ ಮಾನವರಲ್ಲೆಲ್ಲ ಪರಿಪೂರ್ಣನು, ಉತ್ತಮನು. ಮಾನವ ಜೀವನದ ಎಲ್ಲ ಅಂಗಗಳನ್ನೂ ಅವನು ಸಮಗ್ರವಾಗಿ ಬದುಕಿದವನು; ಅವನದು ತುಂಬು ಜೀವನ. ಕುಟುಂಬ, ಸ್ನೇಹಿತರು, ಬಂಧುಗಳು, ಪತ್ನಿಯರು, ವೈರಿಗಳು, ಮಹಾಪುರುಷರು – ಹೀಗೆ ಎಲ್ಲ ವಿಷಯಗಳಲ್ಲೂ ಅವನು ಮಿಗಿಲಾದವನ್ನೇ ಸಂಪಾದಿಸಿದ, ಎಲ್ಲರೊಡನೆ ಬೆರೆತೂ ಅವರಿಂದ ಬೇರೆಯಾಗಿ ನಿಂತ. ಅವನು ಯಾರಿಂದಲೂ ಏನನ್ನೂ ಬೇಡಲಿಲ್ಲ, ಆದರೆ ಪ್ರತಿಯೊಬ್ಬರಿಗೂ ನೀಡುತ್ತಲೇ ಹೋದ. ತ್ಯಾಗ, ವೈರಾಗ್ಯ ಇವುಗಳೆಲ್ಲ ತನ್ನ ಪಾಲಿಗೆ; ಪ್ರೀತಿ, ಸುಖ, ಆನಂದಗಳೆಲ್ಲ ಇತರರ ಪಾಲಿಗೆ. ಶ್ರೀಕೃಷ್ಣನ ಮಹಿಮಾತಿಶಯವಿರುವುದೇ ಇಂತಹ ಅಸದೃಶ ಸ್ವಭಾವದಲ್ಲಿ.

ಮತ್ಸ್ಯಕೂರ್ಮಾದಿ ಅವತಾರಗಳೆಲ್ಲ ಕಾಲದ ಒಂದೊಂದು ಆವಶ್ಯಕತೆಗಾಗಿ ನಡೆದರೆ, ಕೃಷ್ಣಾವತಾರವನ್ನು ಹಾಗನ್ನುವಂತಿಲ್ಲ. ಕಾಲದ ಅಗತ್ಯವನ್ನು ಪೂರೈಸುವುದಕ್ಕಾಗಿಯೇ ಶ್ರೀಕೃಷ್ಣಾವತಾರ ನಡೆದರೂ, ಅಲ್ಲಿ ವ್ಯಕ್ತವಾಗುವ ಭಾವಗಳು ಸಮಗ್ರ ಮಾನವ ಜನಾಂಗದ, ಇಡೀ ಪ್ರಪಂಚದ, ಸೃಷ್ಟಿಯ ಎಲ್ಲ ಜೀವಿಗಳ ಉದ್ಧಾರವನ್ನು ಮಾಡಬಲ್ಲವು ಅನಿಸುತ್ತದೆ. ಶ್ರೀಕೃಷ್ಣನ ಜೀವನ ಹಾಗೂ ಉಪದೇಶಗಳು ಈ ಪರಿಪೂರ್ಣತೆಯನ್ನು ತನ್ನಲ್ಲಿ ಅಡಕಗೊಳಿಸಿರುವುದರಿಂದಲೇ, ಈ ಅವತಾರವನ್ನು 'ಪೂರ್ಣಾವತಾರ' ಎಂದು ಕರೆದಿರಬೇಕು. ಶ್ರೀಕೃಷ್ಣನ ಕಥೆಯನ್ನು ವಿಸ್ತಾರವಾಗಿ ಸಾರುವ ಭಾಗವತ, ಮಹಾಭಾರತಗಳು, ಇತರ ಪುರಾಣ–ಉಪಪುರಾಣಗಳಲ್ಲಿ ಮತ್ತು ಅವನ ತತ್ತ್ವಗಳು ನಿತ್ಯನೂತನವಾಗಿ ಪ್ರವಹಿಸುತ್ತಿರುವ ಭಗವದ್ಗೀತೆಯಲ್ಲಿ ಈ ಪೂರ್ಣತೆ ಸಮಗ್ರವಾಗಿ ಚಿತ್ರಿತವಾಗಿದೆ. ಪ್ರತಿವರ್ಷ ನಾವು ವೈಭವೋತ್ಸಾಹಗಳಿಂದ ಆಚರಿಸುವ 'ಶ್ರೀಕೃಷ್ಣ ಜನ್ಮಾಷ್ಟಮಿ'ಯ ಪುಣ್ಯದಿನದಂದು ಇಂತಹ ಕೃತಿಗಳನ್ನು ಓದಬೇಕು; ಶ್ರೀಕೃಷ್ಣನ ದಿವ್ಯಜೀವನ, ತತ್ತ್ವಗಳನ್ನು ನಮ್ಮೆದೆಯಲ್ಲಿ ಧರಿಸಿಕೊಳ್ಳಬೇಕು. ಹೀಗೆ ಅವನ ನಿರಂತರ ದಿವ್ಯಲೀಲೆ ನಮ್ಮೆಲ್ಲರ ಅಂತರಂಗದಲ್ಲಿ ಹರಿದಾಡಬೇಕು; ಇದರಿಂದ ನಾವೂ ಅವನ ದಿವ್ಯತೆಯ ಭಾಗವಾಗುತ್ತೇವೆ. ಅಂತಹ ಮಾನಸಿಕ ಸ್ಥಿತಿಯನ್ನು ತಲುಪಿದಾಗ ವೃಂದಾವನ, ಗೋಕುಲ, ಮಧುರೆ, ದ್ವಾರಕೆಗಳೆಲ್ಲ ಎಲ್ಲೋ ದೂರ ಇರುವುದಿಲ್ಲ; ನಮ್ಮ ಹೃದಯದಲ್ಲೇ ಆ ದಿವ್ಯಧಾಮಗಳೆಲ್ಲ ಶ್ರೀಕೃಷ್ಣನ ನೆನಪಿನೊಂದಿಗೆ ನಿರಂತರ ಅನುರಣಿಸುತ್ತಿರುತ್ತವೆ. ✤